ವಾರದ ಪತ್ರ

# ರಾಜಕೀಯದ 'ಅನುಬಂಧ'

ಕಲರ್ಸ್ ಕನ್ನಡದಲ್ಲಿ ನಡೆದ 'ಅನುಬಂಧ' ಅವಾರ್ಡ್‌ನಲ್ಲಿ ಕಿರುತೆರೆಯ ಕಲಾವಿದರಿಗೆ ಪ್ರಶಸ್ತಿ ನೀಡಲು ಬೆಂಗಳೂರಿನ ಯುವ ಸಂಸದರಾದ ತೇಜಸ್ವಿ ಸೂರ್ಯ ಆಗಮಿಸಿ ವೇದಿಕೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು.

ವಿಶೇಷ ಅತಿಥಿಯಾಗಿ ಆಗಮಿಸಿದ್ದ ಅವರು, ಕಲಾವಿದರ ಮುಂದೆ ವಾಕ್ ಚಾತುರ್ಯ ಪ್ರದರ್ಶಿಸುವ ಭರದಲ್ಲಿ ರಾಜಕೀಯದ ಬಗ್ಗೆ ಮಾತನಾಡಿದ್ದು ಎಷ್ಟರ ಮಟ್ಟಿಗೆ ಸರಿ?

ಕಲೆ, ಸಂಸ್ಕೃತಿ, ಯುವಕರ – ಕಲಾವಿದರ ಕ್ರಿಯಾಶೀಲತೆ, ಸಾಮಾಜಿಕ ಕಾಳಜಿಯ ಬಗ್ಗೆ ಮಾತನಾಡಿದ್ದರೆ ಆ ವೇದಿಕೆಗೆ ಗೌರವ ಹೆಚ್ಚಾಗುತಿತ್ತು. ಅದರ ಬದಲು ಪಶ್ಚಿಮ ಬಂಗಾಳದ ಚುನಾವಣೆ, ಪಕ್ಷದ ಗುರಿ ಬಗ್ಗೆ ಪುಂಖಾನುಪುಂಖವಾಗಿ ಮಾತಾಡಿದರು. ಇದಕ್ಕೆ ಪ್ರೇರಣೆ ನೀಡಿದ್ದು ನಿರೂಪಕರು..! ರಾಜಕೀಯ ಪಕ್ಷ ಮತ್ತು ಚುನಾವಣೆ ಬಗ್ಗೆ ಮಾತಾಡಲೂ ಇದೇ ವೇದಿಕೆ ಬೇಕಾಗಿತ್?

–ರಾಂಚಂದ್ರಕೊಪ್ಪಲು ತೀರ್ಥಹಳ್ಳಿ

## ಅಸಹಜ ಆಗದಿರಲಿ

ಝೀ ಕನ್ನಡದ 'ಮಹಾನಾಯಕ' ದಲಿತರ ಸಂಕಷ್ಟಗಳನ್ನು ಮನ ಮಿಡಿಯುವಂತೆ ತೋರಿಸುತ್ತಾರೆ. ನಮ್ಮ ಸಮಾಜ ಇಷ್ಟೊಂದು ಕ್ರೂರವಾಗಿತ್ತಾ? ಬದಲಾವಣೆ ಬರಲು ಯಾಕೆ ಇಷ್ಟು ವರ್ಷಗಳು ಬೇಕಾಯಿತು? ಸದ್ಯ ಈಗ ಈ ಅನಿಷ್ಟ ಪದ್ಧತಿ ಬಹುಮಟ್ಟಿಗೆ ನಿವಾರಣೆಯಾಗಿದೆ ಎಂದು ಸಂತೋಷಿಸಬೇಕು.

ಧಾರಾವಾಹಿಯ ಮುಖ್ಯ ಆಕರ್ಷಣೆ ಪುಟ್ಟ ಭೀಮರಾವ್ ಪಾತ್ರಧಾರಿ. ಅವನ ನಟನೆ ಅತ್ಯದ್ಭುತ. ಆದರೆ ಕಾಲಕ್ಕೆ ತಕ್ಕಂತೆ ಅವನು ದೊಡ್ಡವನಾಗಿ ಮತ್ತೊಬ್ಬ ನಟನನ್ನು ತರುವ ಬದಲು ಪುಟ್ಟ ಹುಡುಗನ ಬಾಯಲ್ಲಿ ವಯಸ್ಸಿಗೆ ಮೀರಿದ ವಿಚಾರಗಳನ್ನು ಹೇಳಿಸುವುದು ಸಮರ್ಪಕವಾಗಿಲ್ಲ.

ಇದಲ್ಲದೆ, ಅಂಬೇಡ್ಕರ್ ಗುರುಗಳು ಮತ್ತು ಒಂದಿಬ್ಬರನ್ನು ಬಿಟ್ಟರೆ ಇಡೀ ಸಮಾಜ ಮಾನವೀಯತೆ ಇಲ್ಲದಂತೆ ಚಿತ್ರೀಕರಿಸಿರುವುದು ಸರಿಯಲ್ಲ. ಕೆಲವರಾದರೂ ಮರುಗುತ್ತಾ ಆದರೆ ಸಮಾಜವನ್ನು ಎದುರಿಸಲಾಗದೆ ಅಸಹಾಯಕ ಸ್ಥಿತಿಯಲ್ಲಿರುವುದನ್ನು ತೋರಿಸಬೇಕಾಗಿತ್ತು.

–ಮಾಲತಿ ವೈದ್ಯನಾಥ್

## ತೊಲ ಮತ್ತು ನಿಧಿ!

ಝೀ ಕನ್ನಡದ 'ಸತ್ಯ'ಕೂಡ ಅಸಜತೆಗಳ ಆಗರವಾಗಿ ಓಡುತ್ತಿದೆ. ಇಪ್ಪತ್ತು ತೊಲ ಬಂಗಾರ ನೀಡದಿದ್ದರೆ ಮದುವೆ ನಿಲ್ಲುತ್ತದೆ ಎಂದು ಮನೆಮಗಳು ಹೆದರಿಸಿ ಹೋಗುತ್ತಾಳೆ. ಮದುಮಕ್ಕಳು ಪಾರ್ಕಿನಲ್ಲಿ ಆ ಬಗ್ಗೆ ಚರ್ಚಿಸುತ್ತಾರೆ. ಇಲ್ಲಿ 'ತೊಲ' 'ತೊಲೆ'ಯಾಗಿ ರೂಪಾಂತರಗೊಂಡು ಮಜಾ ಕೊಡುತ್ತದೆ.

ಇಪ್ಪತ್ತು ತೊಲೆ ಬಂಗಾರದ ಬಗ್ಗೆ ಮಾತುಕತೆಯಾಗಿ ಆ 'ಇಪ್ಪತ್ತು ತೊಲೆ' ಬಂಗಾರವನ್ನು ಹುಡುಗನೇ ಕೊಡಲು ಒಪ್ಪುತ್ತಾನೆ. ತೊಲೆ ಎಂದರೆ ಚಾವಣಿಯ ಭಾರವನ್ನು ತಡೆಯಲು ಬಳಸುವ ಮರದ ಅಥವಾ ಕಬ್ಬಿಣದ ದಿಮ್ಮಿ ಎಂದು ಅರ್ಥ. ಅಂತಹ ಇಪ್ಪತ್ತು ತೊಲೆ ಚಿನ್ನವನ್ನು ಊಹಿಸಿಕೊಳ್ಳಿ. ನಗು ಬರುವುದಿಲ್ಲವೇ? ತೊಲ ಎಂದರೆ ಚಿನ್ನದ ಮಾಪನದಲ್ಲಿ ಬಳಸುವ ಪದ. ಒಂದು ತೊಲ 10 ಗ್ರಾಂಗೆ ಸಮ.

'ಕಮಲಿ' ಮತ್ತು 'ಪಾರು'ನಲ್ಲಿ ಮೂರು ದಿನ ಹಿಗ್ಗಿಸಿ ಸಂಕ್ರಾಂತಿಯಲ್ಲಿ ನಿಧಿ ಪ್ರಸಂಗವನ್ನು ತರಲಾಗಿತ್ತು. ಭೂಮಿಪೂಜೆಯಲ್ಲಿ ಸಿಕ್ಕ ನಿಧಿ ಪೂಜೆ ಮಾಡಿ ಮರುದಿನ ಸರ್ಕಾರಕ್ಕೆ ಒಪ್ಪಿಸಲು ಅಖಿಲಮ್ಮ ನಿರ್ಧರಿಸುತ್ತಾರೆ. ಗ್ರಾಮಸ್ಥರು ಆ ನಿಧಿ ತಮಗೆ ಸೇರಬೇಕೆನ್ನತ್ತಾರೆ. ಹೀಗೇ ಅಸಂಬದ್ಧವಾದ ಕಥೆ.

–ವಾ. ಮುರಳೀಧರ, ತೀರ್ಥಹಳ್ಳಿ

## ಸಂಶಯದ ಸುತ್ತ ಗೀತಾ

ಕಲರ್ಸ್‌ನ 'ಗೀತಾ'ದ ಗೀತಾಳ ದಸೆಯಿಂದ ಗೋತಾ ಹೊಡೆಯುತ್ತಿದೆ ಎಂದೆನಿಸುತ್ತಿದೆ. ಆರಂಭದಿಂದ ಎಷ್ಟೋ ಕಠಿಣ ಸಮಸ್ಯೆಗಳನ್ನು ತನ್ನ ಜಾಣತನದಿಂದ ಬಗೆಹರಿಸಿಕೊಂಡ ಗೀತಾ ಇದ್ದಕಿದ್ದಂತೆ ಮತಿಗೆಟ್ಟವಳಂತೆ ಆಗಿಬಿಡುತ್ತಾಳೆ ತನ್ನ ಅತ್ತೆಗೋ ಅಡುಗೆಯವಳಿಗೋ ಬಾರಿಸುವುದನ್ನು ಬಿಟ್ಟು ತನ್ನ ಅಮಾಯಕ ಗೆಳತಿಯರ ಮೇಲೆ ಕೈ ಮಾಡುತ್ತಾಳೆ ಇವಳು ನಿಜವಾಗಲೂ ಸ್ವಾಭಿಮಾನಿಯೋ ಇಲ್ಲ ಹುಚ್ಚಿಯೋ ಎಂಬ ಸಂಶಯ ಮೂಡುತ್ತದೆ.

–ಎನ್.ಎಸ್. ಚಂದ್ರಶೇಖರ್, ಬೆಂಗಳೂರು.

ಮತ್ಸರಕ್ಕೆ ಮನ್ನಣೆ: ಪ್ರತಿದಿನ ಸೊಸೆ ಗೀತಾಳನ್ನು ಮನೆಯಿಂದ ಹೊರಹಾಕಲು ತಮ್ಮಂದಿರ ಜೊತೆ ವ್ಯೂಹ ರಚಿಸುತ್ತಿರುವ ಭಾನುಮತಿಗೆ 'ಅನುಬಂಧ ಅವಾರ್ಡ್' ನಲ್ಲಿ ಮನೆ ಮೆಚ್ಚಿದ ಅತ್ತೆ ಬಹುಮಾನ ಎಂತಹ ವಿಪರ್ಯಾಸ.

–ಸಿ.ಆರ್. ಶ್ರೀನಿವಾಸ

## ತಾಯಿ ಎಂಬುದು ಮೌಲ್ಯ

ಕೆಟ್ಟ ಮಕ್ಕಳು ಹುಟ್ಟಬಹುದು, ಕೆಟ್ಟ ತಾಯಿ ಇರುವುದಿಲ್ಲ ಎಂಬ ನಾಣ್ನುಡಿ ಇದೆ. ಆದರೆ ಧಾರಾವಾಹಿಗಳಲ್ಲಿ ಕೆಟ್ಟ ತಾಯಿಯರ ಅಟ್ಟಹಾಸ ಮಿತಿ ಮೀರುತ್ತಿದೆ.

'ಹೂ ಮಳೆ'ಯ ಕಾವೇರಿ, 'ಗಟ್ಟಿಮೇಳ'ದ ಸುಹಾಸಿನಿ ವಸಿಷ್ಠ, 'ಕನ್ನಡತಿ'ಯ ಹರಿಣಿ ಅಂದರೆ ಸಾನಿಯಾ ತಾಯಿ. ಇವರು ಹಿರಿಯರ ಸ್ಥಾನದಲ್ಲಿದ್ದೂ, ಬುದ್ಧಿ ಹೇಳುವುದಕ್ಕಿಂತ, ಪರಿಸ್ಥಿತಿಯ ಲಾಭ ಪಡೆಯುವ ಬಗ್ಗೆ ಯೋಚಿಸುವ ರೀತಿ ಅಸಹ್ಯವೆನಿಸುತ್ತೆ. ಇಂತಹ ಪಾತ್ರ ವೈಭವೀಕರಿಸುವುದು ಒಳ್ಳೆಯದಲ್ಲ.

–ಶ್ಯಾಮಾ ಎಚ್.ಎನ್. ಬೆಂಗಳೂರು

## ಕನ್ನಡತಿ ಕಲರ್ಸ್ ಕನ್ನಡ

ಕಲರ್ಸ್‌ನ 'ಕನ್ನಡತಿ' ಚೆನ್ನಾಗಿ ಮೂಡಿ ಬರುತ್ತಿದೆ. ಮಲೆನಾಡಿನ ಸಂಪ್ರದಾಯ, ಪರಿಸರ, ಕಥೆಯ ನಿರೂಪಣೆ, ಸಂಭಾಷಣೆ ಎಲ್ಲವೂ ಸುಂದರವಾಗಿದ್ದು ಗಟ್ಟಿತನದಿಂದ ಕೂಡಿದೆ. ಕುತೂಹಲದಿಂದ ಕೂಡಿರುವುದರಿಂದ ನೋಡುಗರ ಮನಸ್ಸಿಗೆ ಹಿತವನ್ನು ಕೊಡುತ್ತದೆ. ಸಾಮಾನ್ಯವಾಗಿ ತಂದೆ ತೀರಿಕೊಂಡ ವರ್ಷದೊಳಗೆ ಮದುವೆ ಮಾಡುವುದು ಸಂಪ್ರದಾಯ ಆದರೆ ಇಲ್ಲಿ ಸೂತಕ ಕಳೆಯುವ ಮೊದಲೇ ಹೆಣ್ಣು ನೋಡುವ ಶಾಸ್ತ್ರ ಮಾಡಿದ್ದಾರೆ. ಅದರಲ್ಲೂ ಶಾಸ್ತ್ರ ಸಂಪ್ರದಾಯ ಗೊತ್ತಿರುವ ಅಜ್ಜಿ. ತಾಯಿ, ಅಜ್ಜಿ, ತಂಗಿಯರಿದ್ದಾಗ ಊರಿನಲ್ಲೇ ಅಥವಾ ದೇವಸ್ಥಾನದಲ್ಲೋ ತಂದೆಯ ವೈಕುಂಠದ ಕಾರ್ಯ ನೆರವೇರಿಸುವಂತೆ ಇದ್ದಿದದರೆ ಚೆನ್ನಾಗಿತ್ತು.

–ಕಲ್ಪನಾ ಪ್ರಭಾಕರ ಸೋಮನಳ್ಳಿ, ಶಿರಸಿ

## ಸುಧಾರಣೆಯತ್ತ ಧಾರಾವಾಹಿ

ಧಾರಾವಾಹಿಗಳ ಮನೆ ಮುರುಕತನ, ದ್ವೇಷ, ಸೇಡಿನ ಕಥೆಗಳಿಂದ ನೆಮ್ಮದಿಯ ಕೌಟುಂಬಿಕ ಜೀವನಕ್ಕೆ ಕೊಡುಗೆ ಏನೂ ಇಲ್ಲ ಎನ್ನುವುದು ಲಾಗಾಯ್ತನಿಂದ ಕೇಳಿ ಬರುತ್ತಿರುವ ಮಾತು. ಕಲರ್ಸ್‌ನ 'ಕನ್ನಡತಿ' ಧಾರಾವಾಹಿಯು ಇಂತಹ ಟೀಕೆಗಳನ್ನು ಸುಳ್ಳಾಗಿಸಿದೆ. ಈ ಧಾರಾವಾಹಿಯಲ್ಲಿ ಸಂಪ್ರದಾಯವನ್ನು ಮುರಿದ ಮಗಳು.

ಇದರಿಂದ ಪ್ರೇರಿತರಾಗಿ, ಪ್ರಭಾವಿತರಾಗಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಯುವತಿಯೊಬ್ಬಳು ಗಂಡು ಮಕ್ಕಳಿಲ್ಲದ, ಹೃದಯಾಘಾತದಿಂದ ಮೃತರಾದ ತಮ್ಮ ತಂದೆಯ ಶವದ ಅಂತ್ಯಕ್ರಿಯೆ ಮಾಡಿ ದಿಟ್ಟತನ ಮೆರೆದು ಸುಧಾರಣೆಯತ್ತ ದಾಪುಗಾಲು ಹಾಕಿ ಬದಲಾವಣೆಗೆ ನಾಂದಿ ಹಾಡಿದ್ದಾಳೆ.

–ರಮಾನಂದ ಶರ್ಮಾ, ಬೆಂಗಳೂರು

## ನಾಮಕರಣ ಹೊಸತು

ಕಲರ್ಸ್‌ನ ಅನುಬಂಧದಲ್ಲಿ ಕೆಲ ಕಲಾವಿದರು, ತಂತ್ರಜ್ಞರನ್ನು ಗೌರವಿಸುವ ಕೆಲಸ ನಡೆಯಿತು. ಅದರಲ್ಲಿ ಚಾನೆಲ್ ಪ್ರಚಾರವೇ ಮುಖ್ಯವಾಗಿತ್ತು. ಏಕತಾನತೆಯಿಂದ ಕೂಡಿತ್ತು. ಚಿಕ್ಕ ಮಗುವಿಗೆ 'ಕನ್ನಡತಿ' ಹೆಸರು ಇಡುವ ಸಂದರ್ಭ ಹೊಸತೆನಿಸಿದರೂ ನಾಟಕೀಯವಾಗಿತ್ತು. ಉತ್ತಮ ಕಥಾ ನಿರೂಪಣೆ ಗುರುತಿಸುವಾಗ ಕಡಿಮೆ ಕೆಟ್ಟದನ್ನೇ ಉತ್ತಮವೆಂದುಕೊಂಡರು.

–ಕೆ.ಎಸ್. ಸೋಮೇಶ್ವರ, ಬೆಂಗಳೂರು